# ಕನ್ನಡ ಪೋಸ್ಟ್

ಇದು ಸುದ್ದಿ ವಿಲಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 137 | Pages. 2 | Date: 01-04-2025, TUESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 137 - ಪುಟಗಳು : 2 - 01 ಏಪ್ರಿಲ್ 2025 ಮಂಗಳವಾರ Ph: 8762954248 ದರ : ₹1


# ಜಿಲ್ಲಾದ್ಯಂತ ಸಂಭ್ರಮದ ರಂಜಾನ್ ಆಚರಣೆ

## 2024 ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆಗೆ ವಿರೋಧ — ಘೋಷಣಾ ಫಲಕ ಪ್ರದರ್ಶನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರ ಸೇರಿದಂತೆ ಜಿಲ್ಲಾದ್ಯಂತ ಸೋಮವಾರ ಮುಸ್ಲಿಂ ಬಾಂಧವರು ಶ್ರದ್ಧೆ, ಭಕ್ತಿ ಸಂಭ್ರಮದಿಂದ ರಂಜಾನ್ ಆಚರಿಸಿದರು.

ಬೆಳಿಗ್ಗೆಯೇ ಶ್ವೇತ ವಸ್ತ್ರಧಾರಿಗಳಾಗಿ ಮೈದಾನಗಳತ್ತ ಬಂದ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಮೂಲಕ ವಿಶ್ವದಲ್ಲೆಡೆ ಶಾಂತಿ ನೆಲೆಸಲೆಂದು ಪ್ರಾರ್ಥಿಸಿದರು.

ಹಾಸನದ ಡಾ. ಎಪಿಜೆ ಅಬ್ದುಲ್ ಕಲಾಂ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಪ್ರಾರ್ಥನೆಯಲ್ಲಿ ಧರ್ಮಗುರು ಮೌಲ್ವಿ ನಿಸಾರ್ ಸಾಹೇಬ್ ಅವರು ಕಳೆದ ಒಂದು ತಿಂಗಳು ಉಪವಾಸ ಆಚರಣೆಯಲ್ಲಿ ತೊಡಗಿ ದೈವಾನುಗ್ರಹದ ಕೃಪೆಗೆ ಪಾತ್ರರಾದ ಮುಸ್ಲಿಂ ಸಮುದಾಯವನ್ನು ಅಭಿನಂದಿಸಿದರು.



### ಶಾಂತಿಯುತ ಹೋರಾಟ ಅಗತ್ಯ

ಮುಸ್ಲಿಂ ಸಮುದಾಯವು ಜಾಗತಿಕವಾಗಿ ಹಾಗೂ ನಮ್ಮ ದೇಶದಲ್ಲೂ ಅನೇಕ ರೀತಿಯ ಸವಾಲುಗಳನ್ನು ಎದುರಿಸಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಸ್ಲಾಂ ತತ್ವಗಳ ತಳಹದಿಯ ಆಧಾರದಲ್ಲೇ ಇವುಗಳನ್ನು ಎದುರಿಸಬೇಕಾಗಿದೆ. ಕೇಂದ್ರ ಸರ್ಕಾರವು ಜಾರಿ ಮಾಡಲು ಪ್ರಯತ್ನಿಸುತ್ತಿರುವ ವಕ್ಫ್ ಮಸೂದೆಯು ಭಾರತದ ಮುಸ್ಲಿಮರ ವಿರುದ್ಧ ಒಂದು ಹೊಸ ಗದಾ ಪ್ರಹಾರವಾಗಿದೆ. ಇದನ್ನು ನಾವು ಒಗ್ಗಟ್ಟಾಗಿ ಎದುರಿಸಬೇಕಿದೆ. ಇದರ ವಿರುದ್ಧದ ಹೋರಾಟದ ವೇಳೆ ಇಸ್ಲಾಂ ಧರ್ಮ ತೋರಿಸುವ ಶಾಂತಿ ಮಾರ್ಗದ ಮೂಲಕವೇ ಹೋರಾಡಬೇಕು. ಯಾವುದೇ ಕಾರಣಕ್ಕೂ ಹಿಂಸಾ ಮಾರ್ಗವನ್ನು ತುಳಿಯದೆ ಧರ್ಮದ ಘನತೆಯನ್ನು ತೋರಿಸಿಕೊಡಬೇಕು ಎಂದರು.

### ಹಾದಿ ತಪ್ಪುತ್ತಿರುವ ಯುವ ಸಮುದಾಯ

ಮುಸ್ಲಿಂ ಸಮುದಾಯದ ಯುವಕರು ಹಾದಿ ತಪ್ಪುತ್ತಿದ್ದಾರೆ. ಬಹಳಷ್ಟು ಯುವಕರು ಮಾದಕ ವ್ಯಸನಿಗಳಾಗಿದ್ದಾರೆ. ಅವರು ಇಡೀ ಸಮಾಜಕ್ಕೆ ಕಂಟಕರಾಗುವುದರ ಜತೆಗೆ ಮುಸ್ಲಿಂ ಸಮುದಾಯಕ್ಕೂ ಕೆಟ್ಟ ಹೆಸರು ತರುತ್ತಿರುವುದು ದುರದೃಷ್ಟಕರ. ಇದಲ್ಲದೆ ಪ್ರಾಣ ಕಂಟಕವಾದ ದ್ವಿಚಕ್ರ ವಾಹನಗಳ ವ್ಹೀಲಿಂಗ್ ಚಟಕ್ಕೆ ಬಿದ್ದು ನಮ್ಮ ಯುವಕರು ಅಮೂಲ್ಯವಾದ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಬೇರೆಯವರಿಗೂ ಇದರಿಂದ ತೊಂದರೆ ಉಂಟು ಮಾಡುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು. ಪೋಷಕರು ತಮ್ಮ ಮಕ್ಕಳು ಮಾದಕ ವಸ್ತುಗಳ ದಾಸರಾಗದಂತೆ, ವ್ಹೀಲಿಂಗ್‌ನಂಥ ದುಷ್ಕೃತ್ಯಗಳಲ್ಲಿ ತೊಡಗದಂತೆ ಎಚ್ಚರವಹಿಸಬೇಕೆಂದು ಕಿವಿಮಾತು ಹೇಳಿದರು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ. ಸ್ವರೂಪ್ ಮತ್ತಿತರರು ರಂಜಾನ್ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಶುಭಾಶಯ ಕೋರಿದರು.




### ಕೇಂದ್ರದ ವಿರುದ್ಧ ಆಕ್ರೋಶ

ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆ-2024ರ ವಿರುದ್ಧ ದೇಶಾದ್ಯಂತ ಹೋರಾಟ ನಡೆಸುತ್ತಿರುವ ಮುಸ್ಲಿಂ ಸಮುದಾಯದವರು ಸೋಮವಾರದ ರಂಜಾನ್ ಪ್ರಾರ್ಥನೆಯಲ್ಲೂ ಘೋಷಣಾ ಫಲಕ ಹಿಡಿದು ಮೌನ ಪ್ರತಿಭಟನೆ ನಡೆಸಿದರು.

ಸಾಮೂಹಿಕ ಪ್ರಾರ್ಥನೆಯಲ್ಲಿ ಮಕ್ಕಳು, ವಯಸ್ಕರು, ನಾವು 2024ರ ವಕ್ಫ್ ಮಸೂದೆ ತಿದ್ದುಪಡಿಯನ್ನು ವಿರೋಧಿಸುತ್ತೇವೆ ಎಂದು ಪ್ಲೇ ಕಾರ್ಡ್ ಪ್ರದರ್ಶಿಸಿದರು.

ಮುಸ್ಲಿಮರ ಅಸ್ಮಿಯತೆಯ ಪ್ರಶ್ನೆಯಾಗಿರುವ ಮಸೂದೆ ಜಾರಿಗೊಳಿಸಬಾರದು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಎನ್‌ಆರ್‌ಸಿ/ಸಿಎಎ, ತ್ರಿವಳಿ ತಲಾಖ್, 2ಬಿ ಮೀಸಲಾತಿ, ಹಿಜಾಬ್, ಬಾಬ್ರಿ ಮಸೀದಿ, ಮಸೀದಿ ಜಾಗಗಳು ಹಿಂದೂ ದೇವಾಲಯಗಳೆಂಬ ವದಂತಿ ಹಬ್ಬಿಸಿ ದ್ವೇಷದ ರಾಜಕಾರಣ ಮಾಡಲಾಗುತ್ತಿದೆ. ದೇಶಾದ್ಯಂತ ಶಾಂತಿ ಕದಡುವ ಯತ್ನ ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದೆ ಎಂದರು. ವಕ್ಫ್ ಅಂದರೆ ದಾನ, ದೇಣಿಗೆ ನೀಡುವುದು ಎಂದರ್ಥ. ಪುರಾತನ ಕಾಲದಲ್ಲಿ ಹಳ್ಳಿಗಳಲ್ಲಿದ್ದ ಶ್ರೀಮಂತರು ಮಸೀದಿ, ಮದರಸ, ಈದ್ಗಾ, ಖಬರಸ್ತಾನ್, ಆಸ್ಪತ್ರೆಗೆ ಜಾಗವನ್ನು ಸಮುದಾಯದ ಏಳಿಗೆಗಾಗಿ ದಾನ ನೀಡಿದ್ದಾರೆ. ಆದರೆ ಅದನ್ನು ಅರ್ಥಮಾಡಿಕೊಳ್ಳದ ಇಂದಿನ ಕೇಂದ್ರ ಸರ್ಕಾರ ಕಾಯ್ದೆಗೆ ತಿದ್ದುಪಡಿ ತಂದು ಮುಸ್ಲಿಂ ಸಮುದಾಯದ ಮೇಲೆ ಪ್ರಹಾರ ನಡೆಸುತ್ತಿದೆ ಎಂದು ಆರೋಪಿಸಿದರು. ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಅಫಸರ್ ಕೊಡ್ಲಿಪೇಟೆ, ಫೈರೋಜ್ ಪಾಷ, ಮುಬಾರಕ್ ಇತರರಿದ್ದರು.

### ಪಕ್ಷಗಳಿಗೆ ಪಾಠ ಕಲಿಸಬೇಕು

ವಕ್ಫ್ ಮಸೂದೆಗೆ ಸಂಬಂಧಿಸಿದಂತೆ ಜಾತ್ಯತೀತ ಪಕ್ಷಗಳ ನಡುವಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಎಷ್ಟರಮಟ್ಟಿಗೆ ಈ ಪಕ್ಷಗಳು ಮುಸ್ಲಿಂ ಸಮುದಾಯದ ಪರವಾಗಿ ನೈಜ ಕಾಳಜಿ ಹೊಂದಿವೆ. ಕೇವಲ ನಮ್ಮ ಸಮುದಾಯದ ಓಟಿಗಾಗಿ ತೋರಿಕೆಯ ಕಾಳಜಿ ವ್ಯಕ್ತಪಡಿಸುತ್ತಿವೆಯೇ? ಎಂಬುದನ್ನು ಇಡೀ ಮುಸ್ಲಿಂ ಸಮುದಾಯ ನಿರ್ಧರಿಸಿ ಸರಿಯಾದ ಸಮಯಕ್ಕೆ ಅವರಿಗೆ ಪಾಠ ಕಲಿಸಬೇಕಾಗುತ್ತದೆ ಎಂದು ರಾಜಕೀಯ ಪಕ್ಷಗಳಿಗೆ ಎಚ್ಚರಿಕೆ ನೀಡಿದರು.

### ಇಸ್ಲಾಂ ತತ್ವ ಪಾಲಿಸಿ

ಇಸ್ಲಾಂ ಧರ್ಮದ ತತ್ವಗಳನ್ನು ಜೀವನದ ಪ್ರತಿಯೊಂದೂ ಸಂದರ್ಭದಲ್ಲಿ ಪಾಲಿಸಿ, ಪ್ರವಾದಿ ತೋರಿಸಿದ ಹಾದಿಯಲ್ಲಿ ನಿಷ್ಠೆಯಿಂದ ನಡೆದುಕೊಂಡರೆ ಇಹ ಹಾಗೂ ಪರಲೋಕದಲ್ಲೂ ಸತ್ಫಲ ದೊರೆಯುತ್ತದೆ. ಆ ನಿಟ್ಟಿನಲ್ಲಿ ಪ್ರತಿಯೊಬ್ಬ ಮುಸ್ಲಿಮನೂ ನಿರಂತರ ಪ್ರಯತ್ನಿಸಬೇಕೆಂದು ತಿಳಿಸಿದರು.

# ಹೊನ್ನಾರು ಉತ್ಸವದಲ್ಲಿ ಸಂಭ್ರಮಿಸಿದ ರೈತರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನಾದ್ಯಂತ ಯುಗಾದಿ ಹಬ್ಬ ಹಾಗೂ ಹೊಸ ಸಂವತ್ಸರದ ಪ್ರಯುಕ್ತ ರೈತರು ಹೊನ್ನಾರು ಕಟ್ಟುವ ಮೂಲಕ ಕೃಷಿ ಚಟುವಟಿಕೆಗೆ ಭಾನುವಾರ ಚಾಲನೆ ದೊರೆಯಿತು.

ತಾಲ್ಲೂಕಿನ ಹಿರೀಸಾವೆ, ಉಳ್ಳಾವಳ್ಳಿ, ಕಬ್ಬಾಳು, ಸುಂಡಹಳ್ಳಿ, ಕಾಂತರಾಜಪುರ, ಹೊಸಹಳ್ಳಿ, ಜನಿವಾರ, ಬಿಂಡೇನಹಳ್ಳಿ, ದಂಡಿಗನಹಳ್ಳಿ, ಅಣ್ಣೇನಹಳ್ಳಿ, ತಿಮ್ಮಲಾಪುರ, ಕುಂದೂರು, ಬಾಗೂರು, ಹೆಗ್ಗಡಿಹಳ್ಳಿ, ಬೂವನಹಳ್ಳಿ, ತಗಡೂರು, ಸಂತೇಶಿವರ, ಯಾಚನಘಟ್ಟ ಹಾಗೂ ತುಪ್ಪದಹಳ್ಳಿ ಸೇರಿ ವಿವಿಧ ಗ್ರಾಮಗಳಲ್ಲಿ ಹೊನ್ನಾರು ಉತ್ಸವವು ವೈಭವದಿಂದ ನಡೆಯಿತು.

ಯುಗಾದಿ ಹಬ್ಬದ ಪ್ರಯುಕ್ತ ಪ್ರತಿ ಮನೆಗಳಲ್ಲಿಯೂ ಬಾಗಿಲುಗಳಿಗೆ ಮಾವು ಹಾಗೂ ಬೇವಿನಿಂದ ತಳಿರು-ತೋರಣ ಕಟ್ಟಲಾಗಿದ್ದು ಹೊಸಾ ವಾತಾವರಣ ಸೃಷ್ಠಿಯಾಗಿತ್ತು. ಪುರುಷರು ಎಣ್ಣೆ ಸ್ನಾನ ಮಾಡಿ ದೇಗುಲಗಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿ ಬೇವು-ಬೆಲ್ಲ ಸವಿದರು.



ಇನ್ನು ಮನೆಗಳಲ್ಲಿ ಒಬ್ಬಟ್ಟು ಸಿದ್ದಪಡಿಸಿದ್ದು ಬೇವು-ಬೆಲ್ಲದ ಪ್ರಸಾದ ಮಾಡಿ ದೇವರಿಗೆ ನೈವೇದ್ಯದೊಂದಿಗೆ ಹಣ್ಣು-ಕಾಯಿ ಅರ್ಪಿಸಿ ಪೂಜೆ ಸಲ್ಲಸಿದರು. ಬಳಿಕ ಗ್ರಾಮದ ಜನತೆಯು ದೇಗುಲಗಳ ಬಳಿಯಿಂದ ಪ್ರಾರಂಭವಾಗುವ ಹೊನ್ನಾರು ಉತ್ಸವ ಪೂಜೆಯಲ್ಲಿ ಪಾಲ್ಗೊಂಡರು.

ಎತ್ತುಗಳನ್ನು ವಿಶೇಷವಾಗಿ ಅಲಂಕರಿಸಿ ಹೊನ್ನಾರು ಉತ್ಸವವು ಮಂಗಳವಾದ್ಯದೊಂದಿಗೆ ಆರಂಭಗೊಂಡು ಮರದ ನೇಗಿಲಲ್ಲಿ ಊಳುತ್ತಾ ಸಾಗಿದಂತೆಲ್ಲ ಹೆಣ್ಣು ಮಕ್ಕಳು ಅಲ್ಲಲ್ಲಿ ಹೊನ್ನಾರು ಉತ್ಸವಕ್ಕೆ ಪೂಜೆ ಸಲ್ಲಿಸಿದರು. ಗ್ರಾಮದ ಸುತ್ತ ಒಂದು ಬಾರಿ ಪ್ರದಕ್ಷಣೆ ಬಂದ ಬಳಿಕ ಊರ ಹೆಬ್ಬಾಗಿಲಿಗೆ ವಿಶೇಶ ಪೂಜೆ ಸಲ್ಲಿಸಲಾಯಿತು.

ಕೆಲ ಗ್ರಾಮಗಳಲ್ಲಿ ದೇವರ ಜಮೀನಿನಲ್ಲಿ ಉಳುಮೆ ಮಾಡಿ ಪೂಜೆ ಸಲ್ಲಿಸಲಾಯಿತು.

ಜಾನುವಾರುಗಳ ಆರೋಗ್ಯ ವೃದ್ಧಿಯಾಗಲಿ, ವ್ಯಾಪ್ತಿಯಲ್ಲಿ ಉತ್ತಮವಾಗಿ ಮಳೆ ಸುರಿದು ಬಿತ್ತಿದ ಎಲ್ಲ ಬೆಳೆಗಳು ಉಜ್ವಲವಾಗಿ ಬೆಳೆದು ಉತ್ತಮ ಫಸಲಿನೊಂದಿಗೆ ರೈತನ ಕೈಸೇರಲಿ ಎಂದು ಗ್ರಾಮದ ಮಹಿಳೆಯರು ಹೊನ್ನಾರು ಉತ್ಸವಕ್ಕೆ ವಿಶೇಷ ಪೂಜೆ ಸಲ್ಲಿಸಿದರು.

ಉಳ್ಳಾವಳ್ಳಿ ಗ್ರಾಮದಲ್ಲಿ ಶ್ರೀ ಭೈರವೇಶ್ವರಸ್ವಾಮಿ ದೇಗುಲದ ಬಳಿಯಿಂದ ಹೊನ್ನಾರು ಉತ್ಸವ ನಡೆಸಿ ಹೆಬ್ಬಾಗಿಲ ಬಳಿ ಪೂರ್ಣಗೊಳಿಸಲಾಯಿತು. ಮಂಜುನಾಥ್ ಹೊನ್ನಾರು ಕಟ್ಟಿದ್ದರು. ದಿಡಗ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಎಚ್.ಕೆ. ಯೋಗೇಶ್, ಗ್ರಾಮಸ್ಥರಾದ ರಾಮೇಗೌಡ, ಎಚ್.ಸಿ.ಹರೀಶ್, ಅಭಿ, ಪವನ್, ನಂಜುಂಡಣ್ಣ ಹಾಗೂ ಇತರರು ಇದ್ದರು.

# ಸೌಹಾರ್ದತೆಗೆ ಸಾಕ್ಷಿಯಾದ ಉಲಿವಾಲ ಗ್ರಾಮ

## ಕಲ್ಲೇಶ್ವರ ದೇಗುಲಕ್ಕೆ ದಲಿತರ ಪ್ರವೇಶ : ಈಡೇರಿದ ದಶಕಗಳ ಬೇಡಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ದಲಿತರಿಗೂ ದೇಗುಲ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕೆಂಬ ದಶಕಗಳ ಬೇಡಿಕೆಗೆ 2025ರ ಯುಗಾದಿಗೆ ಕಾಲ ಕೂಡಿಬಂದಿತು.

ತಾಲ್ಲೂಕಿನ ಉಲಿವಾಲ ಗ್ರಾಮದ ಶ್ರೀ ಕಲ್ಲೇಶ್ವರ ದೇವಸ್ಥಾನಕ್ಕೆ ಭಾನುವಾರ ದಲಿತರು ಪ್ರವೇಶಿಸುವ ಮೂಲಕ ಜಾತಿ ಪದ್ಧತಿಗೆ ತಿಲಾಂಜಲಿ ಇಟ್ಟರು. ಆ ಮೂಲಕ ಗ್ರಾಮದಲ್ಲಿ ಸಂತಸದ ವಾತಾವರಣ ನಿರ್ಮಾಣವಾಗಿದೆ. ಧಾರ್ಮಿಕ ಸಮಾನತೆಯ ಹಕ್ಕು ಕಾಪಾಡುವ ನಿಟ್ಟಿನಲ್ಲಿ ದಲಿತರು ಮನವಿ ಮಾಡಿಕೊಂಡಿದ್ದರ ಹಿನ್ನೆಲೆಯಲ್ಲಿ ಅಧಿಕಾರಿ ವರ್ಗದ ಪ್ರಯತ್ನ ಸಾಕಾರವಾಗಿದೆ. ಚೋಳರ ಕಾಲದ ಪುರಾತನ ಕಲ್ಲೇಶ್ವರ ದೇಗುಲ ಇದೀಗ ಜೀರ್ಣೋದ್ಧಾರವಾಗಿದೆ. ಆದರೆ ಪುರಾತನ ಕಾಲದಿಂದಲೂ ದಲಿತರು ಹೊರಗೆ ನಿಂತು ಕೈಮುಗಿದು ಪ್ರಾರ್ಥನೆ ಸಲ್ಲಿಸುವ ವಾಡಿಕೆಯಿತ್ತು.



ಇತ್ತೀಚೆಗೆ ದೇಗುಲ ನೂತನ ನಿರ್ಮಾಣವಾದ ಹಿನ್ನೆಲೆಯಲ್ಲಿ ಲೋಕಾರ್ಪಣೆಯೂ ನಡೆದಿದೆ. ಎಲ್ಲ ಸಮುದಾಯದಂತೆ ದಲಿತರಿಗೂ ದೇವಾಲಯ ಪ್ರವೇಶಕ್ಕೆ ಅವಕಾಶ ಕಲ್ಪಿಸಬೇಕು ಎಂದು ದಲಿತರು ಮನವಿ ಇಟ್ಟಿದ್ದರು. ಈ ಸಂಬಂಧ ಜಿಲ್ಲಾಡಳಿತದ ಗಮನಕ್ಕೆ ತರಲಾಗಿತ್ತು. ಪೊಲೀಸರು ಮತ್ತು ಆಡಳಿತ ವರ್ಗ ಗ್ರಾಮದಲ್ಲಿ ಸಭೆ ನಡೆಸಿತ್ತು. ಆದರೆ ಗ್ರಾಮಸ್ಥರೆ ಇಂದಿನ ಜಾಗತೀಕರಣದ ನಡುವೆಯೂ ಏಕೆ ತಾರತಮ್ಯ ಎಂದು ಎಲ್ಲ ಸಮುದಾಯದೊಂದಿಗೆ ದೇಗುಲ ಪ್ರವೇಶ ಪೂಜೆ ನೆರವೇರಿಸುವ ಮೂಲಕ ಉಲಿವಾಲ ಗ್ರಾಮ ಮಾದರಿಯಾಗಿದೆ.

ಟಉಲಿವಾಲ ಗ್ರಾಮದ ದಲಿತರು ನೂತನ ದೇವಾಲಯಕ್ಕೆ ಪ್ರವೇಶ ಬಯಸಿ ಮನವಿ ಸಲ್ಲಿಸಿದ್ದರು. ಮುಜರಾಯಿ ಇಲಾಖೆಗೆ ಒಳಪಡುವ ದೇವಾಲಯವಾಗಿದೆ. ಆದರೆ ಪೊಲೀಸರ ರಕ್ಷಣೆ ಕೋರಿದ್ದರು. ಮನವಿ ಮೇರೆಗೆ ಗ್ರಾಮಕ್ಕೆ ಭೇಟಿ ನೀಡಿ ಪ್ರಸ್ತಾಪಿಸಿದೆವು. ಗ್ರಾಮದಲ್ಲಿ ಯಾವುದೇ ಆಕ್ಷೇಪ ವ್ಯಕ್ತವಾಗಲಿಲ್ಲ. ವಿವಾದದ ಸಂದೇಹದ ಸುಳಿವು ಇತ್ತಾದರೂ ಎಲ್ಲರ ಸಮ್ಮತಿಯಿಂದ ದಲಿತರು ಪೂಜೆ ಸಲ್ಲಿಸಿದ್ದಾರೆಟ ಎಂದು ಆರಕ್ಷಕ ವೃತ್ತ ನಿರೀಕ್ಷಕ ಬಿ.ಆರ್. ಪ್ರದೀಪ್ ಹೇಳಿದರು.

## ಪುಷ್ಪಗಿರಿ ಮಠದಲ್ಲಿ ನಟ ಧನಂಜಯ ದಂಪತಿ ಪೂಜೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಳೇಬೀಡು: ಚಲನಚಿತ್ರ ನಟ ಡಾಲಿ ಧನಂಜಯ ಹಾಗೂ ಪತ್ನಿ ಡಾ. ಧನ್ಯತಾ ವಿವಾಹದ ನಂತರ ಯುಗಾದಿ ಹಬ್ಬದ ಅಂಗವಾಗಿ ಮನೆ ದೇವರಾದ ಪುಷ್ಪಗಿರಿ ಮಲ್ಲಿಕಾರ್ಜುನ ಸ್ವಾಮಿಯ ದರ್ಶನ ಪಡೆದರು.

ಮಲ್ಲಿಕಾರ್ಜುನ ಸ್ವಾಮಿ ಹಾಗೂ ಪಾರ್ವತಮ್ಮನವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಪತಿ-ಪತ್ನಿ ಇಬ್ಬರು ಭಕ್ತಿಭಾವದಿಂದ ಪೂಜಾ ವಿಧಿ ವಿಧಾನ ವೀಕ್ಷಿಸಿ ಪುನೀತರಾದರು.

ಸಾಂಪ್ರದಾಯಿಕ ಉಡುಗೆಯಾದ ಶ್ವೇತ ವರ್ಣದ ಪಂಚೆ, ಶರ್ಟ್ ಹಾಗು ಶಲ್ಯ ಧರಿಸಿ ಡಾಲಿ ಧನಂಜಯ ದೇವಾಲಯಕ್ಕೆ ಆಗಮಿಸಿದ್ದರು.

ದರ್ಶನದ ನಂತರ ಅಭಿಮಾನಿ ಬಳಗದೊಂದಿಗೆ ಮಾತುಕತೆ ನಡೆಸಿ ಸಂಭ್ರಮದಿಂದ ಕಾಲ ಕಳೆದರು. ಚಾಪೆಯ ಮೇಲೆ ಕುಳಿತು ದೇವಾಲಯದ ಅನ್ನ ಪ್ರಸಾದ ಸ್ವೀಕರಿಸಿದರು.

ನಂತರ ಪುಷ್ಪಗಿರಿ ಮಠಕ್ಕೆ ಭೇಟಿ ನೀಡಿ ಶ್ರೀ ಕರಿ ಗುರು ಬಸವ ಅಜ್ಜಯ್ಯ, 108 ಶಿವಲಿಂಗ ಮಂದಿರ, ಆದಿಯೋಗಿ ಶಿವನ ದರ್ಶನ ಮಾಡಿದರು. ಶ್ರೀ ಸೋಮಶೇಖರ ಸ್ವಾಮೀಜಿ ಆಶೀರ್ವಾದ ಪಡೆದರು.

# ಜೇನುಕಲ್ ಸಿದ್ದೇಶ್ವರ ಸ್ವಾಮಿ ದೇಗುಲಕ್ಕೆ ಸೌಕರ್ಯದ ಭರವಸೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಲಕ್ಷಾಂತರ ಭಕ್ತರ ಆರಾಧ್ಯ ದೈವವಾಗಿರುವ ತಾಲ್ಲೂಕಿನ ಸುಪ್ರಸಿದ್ಧ ಜೇನುಕಲ್ ಸಿದ್ದೇಶ್ವರ ಕ್ಷೇತ್ರಕ್ಕೆ ಅಗತ್ಯ ಮೂಲಸೌಕರ್ಯ ಕಲ್ಪಿಸಲಾಗುವುದು ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಭರವಸೆ ನೀಡಿದರು.

ಅರಸೀಕೆರೆ-ಹಾಸನ ರಾಜ್ಯ ಹೆದ್ದಾರಿಯಿಂದ ಯಾದಾಪುರ ಗ್ರಾಮದ ಶ್ರೀ ಜೇನುಕಲ್ ಸಿದ್ದೇಶ್ವರಸ್ವಾಮಿ ಸನ್ನಿಧಾನಕ್ಕೆ ಸುಮಾರು 5 ಕೋಟಿ ರೂ. ವೆಚ್ಚದಲ್ಲಿ ನೂತನ ಸಂಪರ್ಕ ರಸ್ತೆ ನಿರ್ಮಾಣ ಕಾಮಗಾರಿಗೆ ಸೋಮವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಈ ರಸ್ತೆಯಿಂದ ಪುಣ್ಯ ಕ್ಷೇತ್ರಕ್ಕೆ ಬರುವ ಸಹಸ್ರಾರು ಭಕ್ತರ ಸುಗಮ ಸಂಚಾರಕ್ಕೆ ಅನುಕೂಲ ಆಗಲಿದೆ ಎಂದರು.



ಕೊಳವೆ ಮೂಲಕ ಯಗಚಿ ನದಿ ಮೂಲದಿಂದ ಶ್ರೀಕ್ಷೇತ್ರ ಸೇರಿದಂತೆ ಅರಸೀಕೆರೆ ಕ್ಷೇತ್ರದ ಗ್ರಾಮೀಣ ಜನರಿಗೆ ಕುಡಿಯುವ ನೀರು ಪೂರೈಕೆಗೂ ರೂಪುರೇಷೆ ಸಿದ್ಧಗೊಳ್ಳುತ್ತಿದೆ. ಯಾದಾಪುರ ಹಾಗೂ ಜೇನುಕಲ್ ಸಿದ್ದೇಶ್ವರ ದರ್ಶನಕ್ಕೆ ಬರುವ ಲಕ್ಷಾಂತರ ಭಕ್ತರನ್ನು ಗಮನದಲ್ಲಿರಿಸಿಕೊಂಡು ವಿಶೇಷವಾಗಿ, ಕುಡಿಯವ ನೀರು ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದೆ.

ಈಗಾಗಲೇ ಗ್ರಾಮದಲ್ಲಿ ನಿರ್ಮಿಸಲಾಗಿರುವ ಬೃಹತ್ ಟ್ಯಾಂಕ್‌ಗಳಿಗೆ ನೀರು ತಲುಪಿದ್ದು, ದೇವಾಲಯದ ಅಭಿವೃದ್ಧಿ ಸಮಿತಿ ಹಾಗೂ ಭಕ್ತರ ದಶಕಗಳ ಬೇಡಿಕೆ ಸಾಕಾರಗೊಂಡಿದೆ ಎಂದು ತಿಳಿಸಿದರು.

ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿರುವ ಜೇನುಕಲ್ ಸಿದ್ದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ನನ್ನಿಂದ ಆಗುವ ಎಲ್ಲ ಮೂಲಭೂತ ಸೌಕರ್ಯ ಕಲ್ಪಿಸಿಕೊಡುವುದು ಸ್ವಾಮಿಗೆ ನಾನು ಮಾಡುವ ಸೇವೆ ಎಂದು ಭಾವಿಸಿ, ತನುಮನದಿಂದ ಭಕ್ತಿ ಸಮರ್ಪಣೆ ಮಾಡುವೆ ಎಂದರು.

ಜೇನುಕಲ್ ಸಿದ್ದೇಶ್ವರ ಸ್ವಾಮಿ ದೇವಾಲಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಸವರಾಜ್ ಮಾತನಾಡಿ, ಐತಿಹಾಸಿ ಶ್ರೀ ಜೇನುಕಲ್ ಸ್ವಾಮಿ ಸಿದ್ದೇಶ್ವರ ಜಾತ್ರೆಗೆ ಕೆಲವೇ ದಿನಗಳು ಬಾಕಿ ಇವೆ. ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯದಂತೆ ಸ್ವಾಮಿ ಅವರ ಜಾತ್ರಾ ಮಹೋತ್ಸವ ನಡೆಸಲು ಶಾಸಕರು, ಗ್ರಾಮಸ್ಥರ ಸಹಕಾರದೊಂದಿಗೆ ದೇವಾಲಯ ಅಭಿವೃದ್ಧಿ ಸಮಿತಿ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂದು ಹೇಳಿದರು.

ಗುತ್ತಿಗೆದಾರ ಜ್ಞಾನೇಶ್, ತಾಪಂ ಮಾಜಿ ಸದಸ್ಯ ನಾರಾಯಣಮೂರ್ತಿ, ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಶೇಖರ್, ಮುಖಂಡರಾದ ಸಿದ್ದಪ್ಪ, ದೇವರಾಜ್, ಯಾದಾಪುರ ತೇಜಸ್, ಕಾಂಗ್ರೆಸ್ ಮುಖಂಡ ಬೋರನಕೊಪ್ಪಲು ರವಿ ಹಾಗೂ ಇತರರಿದ್ದರು.

# ಸ್ಥಳೀಯ ತಳಿ ಸಂರಕ್ಷಣೆ ಸರ್ಕಾರದ ಕರ್ತವ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪೂರ್ವಜರು ನಾಟಿ ತಳಿಗಳನ್ನು ಸಂರಕ್ಷಿಸಿ ಬಳುವಳಿಯಾಗಿ ನೀಡಿದ್ದು, ಕೃಷಿಯಲ್ಲಿ ಆ ಪದ್ಧತಿಯನ್ನೇ ಮುಂದುವರೆಸಬೇಕು. ಜೊತೆಗೆ ಅದರ ಸಂರಕ್ಷಣೆ ಸರ್ಕಾರದ ಕೆಲಸ ಎಂದು ಭೂಮಿ ಸುಸ್ಥಿರ ಸಂಸ್ಥೆ ಅಧ್ಯಕ್ಷ ಜಯಪ್ರಸಾದ್ ಹೇಳಿದರು.

ನಗರ ಹೊರವಲಯದ ಕಂದಲಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಅವನಿ ಆರ್ಗ್ಯಾನಿಕ್ಸ್ ಹಾಗೂ ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಚಾಮರಾಜನಗರ ಆಕಾಶವಾಣಿ ವತಿಯಿಂದ ಹಮ್ಮಿಕೊಂಡಿದ್ದ ಸಸ್ಯ ತಳಿಗಳ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆ 2001ರ ತರಬೇತಿ ಹಾಗೂ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಸ್ಥಳೀಯ ತಳಿಗಳು ರೈತರಿಗೆ ವರದಾನ ಹಾಗೂ ಹವಾಮಾನ ವೈಪ್ರರೀತ್ಯಗಳಿಗೆ ಉತ್ತರವಾಗಿದೆ. ಸ್ಥಳೀಯ ತಳಿಗಳ ರಕ್ಷಣೆ ರೈತರು ಹಾಗು ಸರ್ಕಾರದ ಕರ್ತವ್ಯ ಎಂದು ಪ್ರತಿಪಾದಿಸಿದರು.

ಕೃಷಿಯನ್ನು ಸುಸ್ಥಿರಗೊಳಿಸಲು ನಾಟಿ ತಳಿಗಳನ್ನು ಸಂರಕ್ಷಣೆ ಅನಿವಾರ್ಯ. ಬೆಳೆದ ನಾಟಿ ಧಾನ್ಯಗಳನ್ನು ಗುಂಪು ಮಾರುಕಟ್ಟೆ ಮಾಡುವುದರ ಮೂಲಕ ಅಧಿಕ ಆದಾಯ ಪಡೆಯಬಹುದು ಎಂದು ತಿಳಿಸಿದರು. ಹಾಸನ ಆಕಾಶವಾಣಿ ಕಾರ್ಯಕ್ರಮ ಸಂಯೋಜಕ ವಿ. ಮಧುಸೂದನ್ ಮಾತನಾಡಿ, ಜೀವ ವೈವಿಧ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸ್ಥಳೀಯ ತಳಿಗಳ ಮಹತ್ವ ಹಾಗು ಅವುಗಳಲ್ಲಿ ಇರುವ ಪೋಷಣಾ ಭದ್ರತೆ ಮತ್ತು ಹವಾಮಾನ ಬದಲಾವಣೆಗೆ ಇರುವ ಸಹಿಷ್ಣುತೆಯನ್ನು ರೈತರಿಗೆ ಉದಾಹರಣೆಗಳ ಮೂಲಕ ತಿಳಿಸಿದರು.

ಕಾರೆಕೆರೆ ಕೃಷಿ ಮಹಾವಿದ್ಯಾಲಯ ಸಹಾಯಕ ಪ್ರಾಧ್ಯಾಪಕ ಡಾ. ಮಧುಸೂದನ್ ಮಾತನಾಡಿ, ಕೃಷಿ ಪರಂಪರೆಯನ್ನು ಉಳಿಸುವ ಸಲುವಾಗಿ ಸ್ಥಳೀಯ ತಳಿಗಳ ಮಹತ್ವವನ್ನು ಚರ್ಚಿಸುವುದರ ಜೊತೆಗೆ ಪಿಪಿವಿಎಫ್‌ಆರ್ ಕಾಯ್ದೆಯ ಅಡಿಯಲ್ಲಿ ಹೇಗೆ ರೈತರುಗಳು ತಮ್ಮ ಸ್ಥಳೀಯ ತಳಿಗಳನ್ನು ನೋಂದಾಯಿಸಬೇಕು, ಅನುಸರಿಸಬೇಕಾದ ಕ್ರಮಗಳ ಕುರಿತು ವಿವರಿಸಿದರು.

## ಕಳಪೆ ಕಾಮಗಾರಿಗೆ ತೇಪೆ ಹಚ್ಚುವ ಕೆಲಸ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪುರಸಭೆ ಮುಂಭಾಗ ಹಾಗೂ ತಾಲ್ಲೂಕು ಪಂಚಾಯತ್ ಕಚೇರಿ ಎದುರು ಬಾಕಿಯಿದ್ದ ರಸ್ತೆ ಕಾಮಗಾರಿಗೆ ತೇಪೆ ಹಚ್ಚುವ ಕೆಲಸ ಗುತ್ತಿಗೆದಾರನಿಂದ ನಡೆದಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಕಳಪೆ ಕಾಮಗಾರಿಯಿಂದಾಗಿ ತಡೆಹಿಡಿಯಲಾಗಿರುವ ಬಿಲ್ ಪಡೆಯಲು ಗುತ್ತಿಗೆದಾರ ಆತುರದಲ್ಲಿ ಕೆಲಸ ಕೈಗೊಂಡಿದ್ದಾರೆ. ಕಳೆದ ಆರು ತಿಂಗಳ ಹಿಂದೆ ಪುರಸಭೆ 21 ಲಕ್ಷ ರೂ.ಗೆ ಟೆಂಡರ್ ಕರೆದಿದ್ದು ಟೆಂಡರ್ ಪಡೆದ ವ್ಯಕ್ತಿ ಕಳೆದ ಎರಡು ತಿಂಗಳ ಹಿಂದೆ ಕಾಮಗಾರಿ ನಡೆಸಿದ್ದಾರೆ. ಆದರೆ, ಕಾಮಗಾರಿ ನಡೆದ ಒಂದೇ ವಾರಕ್ಕೆ ಡಾಂಬರ್ ಕಿತ್ತು ಬಂದಿದೆ. ರಸ್ತೆಗೆ ಹಾಕಿದ್ದ ಕಾಂಕ್ರೀಟ್ ಧೂಳಿನ ರೀತಿಯಲ್ಲಿ ಕಿತ್ತು ಬರುತ್ತಿದೆ ಎಂಬ ಆರೋಪ ಕೇಳಿಬಂದಿತ್ತು. ಆರೋಪ ಸಾಬೀತುಪಡಿಸುವಂತೆ ಕಾಮಗಾರಿ ನಡೆದ ತಿಂಗಳ ಒಳಗಾಗಿ ಅಲ್ಲಲ್ಲಿ ಗುಂಡಿಗಳು ಸೃಷ್ಟಿಯಾಗಿದ್ದರಿಂದ ಗುತ್ತಿಗೆದಾರರಿಗೆ ಬಿಲ್ ಸಂದಾಯ ಮಾಡದಂತೆ ಅಧಿಕಾರಿಗಳ ಮೇಲೆ ಒತ್ತಡ ಸೃಷ್ಟಿಯಾಗಿತ್ತು. ಪರಿಣಾಮ ಈಗಾಗಲೇ ಗುಂಡಿಗಳು ಸೃಷ್ಟಿಯಾಗಿರುವ ಭಾಗವನ್ನು ಮರುನಿರ್ಮಾಣ ಮಾಡುವಂತೆ ಅಧಿಕಾರಿಗಳು ಸೂಚಿಸಿದ್ದಾರೆ. ಪರಿಣಾಮ ಮೂರು ತಿಂಗಳ ಹಿಂದೆ ನಿರ್ಮಾಣವಾದ ಕಾಂಕ್ರೀಟ್ ರಸ್ತೆಯನ್ನು ಕಿತ್ತು ತೇಪೆ ಹಚ್ಚುವ ಕೆಲಸ ನಡೆಯುತ್ತಿದೆ. ಕಾಂಕ್ರೀಟ್ ರಸ್ತೆಯನ್ನು ಮಧ್ಯದಲ್ಲಿ ಕಿತ್ತು ಮರು ನಿರ್ಮಾಣ ಮಾಡಿದರೆ ನೈಜತೆ ಬರಲಿದೆಯೇ ಎಂಬ ಪ್ರಶ್ನೆ ಜನರನ್ನು ಕಾಡುತ್ತಿದ್ದು ಅಧಿಕಾರಿಗಳೇ ಉತ್ತರಿಸಬೇಕಿದೆ.



# ಸಂಭ್ರಮದ ರಂಗನಾಥ ಸ್ವಾಮಿ ರಥೋತ್ಸವ

## ಸಹಸ್ರಾರು ಭಕ್ತರು ಭಾಗಿ ಚುಂಚಶ್ರೀಗಳಿಂದ ಆಶೀರ್ವಚನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಸಂಜೆ ತೇರು ಎಂದೇ ಪ್ರಸಿದ್ಧವಾಗಿರುವ ಚಿಕ್ಕಬೊಮ್ಮನಹಳ್ಳಿ ಗ್ರಾಮದ ಶ್ರೀ ರಂಗನಾಥಸ್ವಾಮಿ ಮಹಾರಥೋತ್ಸವವು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಇತ್ತೀಚೆಗೆ ನೆರವೇರಿತು.



ಜಾತ್ರಾ ಮಹೋತ್ಸವ ಅಂಗವಾಗಿ ಬೆಳಗಿನಿಂದ ದೇವಾಲಯದ ವಾರ್ಷಿಕೋತ್ಸವ ಹಾಗೂ ರಥೋತ್ಸವದ ಪ್ರಯುಕ್ತ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಸಂಜೆ ವಿವಿಧ ಬಗೆಯ ಪುಷ್ಪಗಳಿಂದ ಹಾಗೂ ಬಗೆಬಗೆಯ ಬಣ್ಣದ ವಸ್ತ್ರಗಳಿಂದ ಅಲಂಕರಿಸಿದ್ದ ರಥದಲ್ಲಿ ಶ್ರೀರಂಗನಾಥಸ್ವಾಮಿಯವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವಿಧಿ ವಿಧಾನಗಳೊಂದಿಗೆ ಪೂಜೆ ಸಲ್ಲಿಸಿ ರಥಾರೋಹಣ ನಡೆಸಲಾಯಿತು.

ಹಾಸನ ಮತ್ತು ಕೊಡಗು ಜಿಲ್ಲೆಯ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹಾಗೂ ಕಬ್ಬಳಿ ಶಾಖಾ ಮಠದ ಶಿವಪುತ್ರನಾಥ ಸ್ವಾಮೀಜಿ, ಮಾಜಿ ಶಾಸಕ ಎ.ಟಿ. ರಾಮಸ್ವಾಮಿ, ಕಾಂಗ್ರೆಸ್ ಮುಖಂಡ ಶ್ರೀಧರ್‌ಗೌಡ ವಿವಿಧ ರಾಜಕೀಯ ಮುಖಂಡರು ಬಲಿಪೂಜೆ ಹಾಗೂ ರಥಕ್ಕೆ ಪೂಜೆ ಸಲ್ಲಿಸಿ ಕದಳಿ ಛೇದನ ಮಾಡಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಬಳಿಕ ಭಕ್ತರು ಹರ್ಷೋದ್ಘಾರದಿಂದ ರಥವನ್ನು ಎಳೆದು ಹಣ್ಣು ಧವನ ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು. ಬ್ಯಾಂಡ್ ಸೆಟ್ ಹಾಗೂ ಮಂಗಳವಾದ್ಯವು ಉತ್ಸವಕ್ಕೆ ಮೆರಗು ನೀಡಿತು. ಜಿಲ್ಲೆಯ ವಿವಿಧ ಭಾಗಗಳ ಆಸ್ತಿಕ ಸದ್ಭಕ್ತರು ಹಾಗೂ ಸುತ್ತಮುತ್ತಲ ಹತ್ತಾರು ಹಳ್ಳಿಗಳಿಂದ ಆಗಮಿಸಿದ್ದ ಗ್ರಾಮಸ್ಥರು ಸರದಿ ಸಾಲಿನಲ್ಲಿ ನಿಂತು ರಂಗನಾಥಸ್ವಾಮಿಗೆ ಪೂಜೆ ಸಲ್ಲಿಸಿ ದರ್ಶನ ಪಡೆದು ಪುನೀತರಾದರು.

ದೇವಾಲಯದ ಸುತ್ತಮುತ್ತಲ ಪ್ರದೇಶದಲ್ಲಿ ಪುರಿ ಅಂಗಡಿ, ಸಿಹಿ ತಿಂಡಿ ತಿನಿಸುಗಳ ಅಂಗಡಿ, ಮಕ್ಕಳ ಆಟಿಕೆಯ ಅಂಗಡಿ, ಕಬ್ಬಿನ ಹಾಲಿನ ಅಂಗಡಿ, ಐಸ್ ಕ್ರೀಂ ಅಂಗಡಿಗಳನ್ನು ತೆರೆಯುವ ಮೂಲಕ ವ್ಯಾಪಾರಸ್ಥರು ಜಾತ್ರೆಯ ಕಳೆ ಹೆಚ್ಚಿಸಿದ್ದರು.

ರಥೋತ್ಸವ ಹಾಗೂ ಜಾತ್ರೆ, ಸಂದರ್ಭದಲ್ಲಿ ಸಕಲ ರೀತಿಯಲ್ಲೂ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಕೊಣನೂರು ಪೊಲೀಸ್ ಸಿಬ್ಬಂದಿ ವರ್ಗದವರು ಶ್ರಮಿಸಿದರು.

ಜಾತ್ರೆ ಹಾಗೂ ರಥೋತ್ಸವ ಅಂಗವಾಗಿ ಜಾತ್ರಾ ಆವರಣ, ರಂಗನಾಥಸ್ವಾಮಿ, ಚಾಮುಂಡೇಶ್ವರಿ ದೇವಾಲಯಗಳು ಮತ್ತು ರಸ್ತೆಯ ಇಕ್ಕೆಲಗಳೂ ವಿವಿಧ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸಲಾಗಿತ್ತು. ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಸಂಖ್ಯೆಯ ಭಕ್ತರಿಗೆ ಪ್ರಸಾದ ವಿನಿಯೋಗ ವ್ಯವಸ್ಥೆ ಮಾಡಲಾಗಿತ್ತು.

ಮುತ್ತಿನ ಪಲ್ಲಕ್ಕಿಯಲ್ಲಿ ಶ್ರೀಗಳ ಮೆರವಣಿಗೆ: ರಥೋತ್ಸವ ನಂತರ ಚಿಕ್ಕಬೊಮ್ಮನಹಳ್ಳಿ ಗ್ರಾಮಕ್ಕೆ ಆಗಮಿಸಿದ ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಮುತ್ತಿನ ಪಲ್ಲಕ್ಕಿ ಉತ್ಸವ ಸಹಿತ ಕುಂಭ, ನಂದಿ ಕುಣಿತ, ವೀರಗಾಸೆ, ಮಂಗಳ ವಾದ್ಯಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ಬೃಹತ್ ಧಾರ್ಮಿಕ ಸಭೆ: ಆಧ್ಯಾತ್ಮಿಕತೆಯ ಹಸಿವಿನ ಕಡೆಗೆ ಹೋದಾಗ ಆಧುನಿಕವಾಗಿರುವ ಎಷ್ಟೋ ದೋಷಗಳು ಮುಚ್ಚಿಹೋಗುತ್ತವೆ. ಇದರಿಂದ ಬಹಳಷ್ಟು ವ್ಯತ್ಯಾಸಗಳು ಕಡಿಮೆಯಾಗುತ್ತವೆ. ಈ ನಿಟ್ಟಿನಲ್ಲಿ ಎಲ್ಲರೂ ಕೂಡ ಧರ್ಮ ಮತ್ತು ಆಧ್ಯಾತ್ಮಿಕತೆಯನ್ನು ಮೈಗೂಡಿಸಿಕೊಳ್ಳಬೇಕಿದೆ ಎಂದು ಶ್ರೀ ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ರಥೋತ್ಸವ ಬಳಿಕ ನಡೆದ ಬೃಹತ್ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಶ್ರೀಗಳು, ಇಂದು ಮಕ್ಕಳು ಕಲಿಯುವ ವಿದ್ಯೆ ಜತೆಯಲ್ಲಿಯಲ್ಲಿಯೇ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿದ್ಯೆ ಸಮ್ಮಿಲಗೊಂಡಂತೆ ಆದರೆ ದೇಶ ಉದ್ಧಾರ ಆಗುತ್ತದೆ. ಹಾಗಾಗಿ ಜ್ಞಾನದ ಸಂಪತ್ತಿಗೆ ಕಡೆ ಹೆಚ್ಚಿನ ನಿಗಾ ಇಟ್ಟು ಪಡೆದುಕೊಳ್ಳಲು ಯುವ ಸಮುದಾಯ ಮುಂದಾಗಬೇಕಿದೆ. ಎಲ್ಲಾ ಹಳ್ಳಿ ಮಕ್ಕಳು ಯಾವುದೇ ಕಾರಣಕ್ಕೂ ವಿದ್ಯೆಯಿಂದ ವಂಚಿತಗೊಳ್ಳಬಾರದು. ಈ ನಿಟ್ಟಿನಲ್ಲಿ ಶ್ರೀ ಮಠ ಸದಾ ಸಮಾಜಕ್ಕೆ ಪೂರಕವಾದ ವಿದ್ಯೆ, ಸಂಸ್ಕಾರ ನೀಡುತ್ತಿದೆ. ಚಿಕ್ಕಬೊಮ್ಮನಹಳ್ಳಿ ಗ್ರಾಮದಲ್ಲಿಯೂ ಕೂಡ ಮಠದ ವತಿಯಿಂದ ಶಿಕ್ಷಣ ಸಂಸ್ಥೆ ಆರಂಭಿಸುವ ಕುರಿತುವ ಧನಾತ್ಮಕವಾಗಿ ಸ್ವೀಕರಿಸಿದ್ದೇನೆ. ಮುಂದಿನ ದಿನಗಳಲ್ಲಿ ಅದು ಕಾರ್ಯರೂಪಕ್ಕೆ ಬರಲಿದೆ ಎಂದು ಹೇಳಿದರು.



ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಮಾತನಾಡಿ, ಇವತ್ತು ಲೌಕಿಕ ವಿದ್ಯೆ ಬಹಳಷ್ಟು ಇದೆ. ಆಧ್ಯಾತ್ಮಿಕ ಜ್ಞಾನದ ಜ್ಯೋತಿ ಬೆಳಗದೇ ಇದ್ದರೆ ಪಾತಳಕ್ಕೆ ಹೋಗುತ್ತಿರುವ ಸಂಸ್ಕಾರ ಮತ್ತು ನೈತಿಕತೆಯನ್ನು ಮೇಲೆತ್ತಲು ಸಾಧ್ಯವಾಗುವುದಿಲ್ಲ. ಆ ದಿಸೆಯಲ್ಲಿ ಧಾರ್ಮಿಕ ನೆಲಗಟ್ಟನ್ನು ಮತ್ತೊಷ್ಟು ಗಟ್ಟಿಗೊಳಿಸಬೇಕಿದೆ. ಬಂಧುತ್ವದ ಬಂಧನ ಭಾವನಾತ್ಮಕವಾಗಿ ಇತ್ತು. ಇವತ್ತು ಅಂತಹ ವಾತಾವರಣವನ್ನು ನೋಡಲು ಸಾಧ್ಯವಾಗುತ್ತಿಲ್ಲ ಎಂದು ಅಸಮಧಾನ ವ್ಯಕ್ತಪಡಿಸಿದರು.

ಶ್ರೀ ಶಂಭುನಾಥ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು, ಕಾಂಗ್ರೆಸ್ ಮುಖಂಡ ಶ್ರೀಧರ್‌ಗೌಡ, ಪ್ರಾಂಶುಪಾಲ ಮಹೇಶ್ ಸಭೆಯಲ್ಲಿ ಉಪಸ್ಥಿತರಿದ್ದರು.

# ಹಾರನಹಳ್ಳಿಯಲ್ಲಿ ಹೆಚ್ಚುತ್ತಿದೆ ಅನೈರ್ಮಲ್ಯ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾರನಹಳ್ಳಿ: ಹೊಯ್ಸಳರ ಕಾಲದ ದೇವಾಲಯ, ಜಿಲ್ಲಾ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಗ್ರಾಮವಾಗಿರುವ ಹಾರನಹಳ್ಳಿಯಲ್ಲಿ ಸ್ವಚ್ಛತೆ ಮರೀಚಿಕೆಯಾಗಿದ್ದು ಸ್ಥಳೀಯರು ಗ್ರಾಮ ಪಂಚಾಯಿತಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಸ್ತೆ ಬದಿ ಚರಂಡಿ ಅವ್ಯವಸ್ಥೆಯಿಂದ ಮಲಿನ ನೀರು ರಸ್ತೆ ಸೇರುತ್ತಿದೆ.

ಪ್ಲಾಸ್ಟಿಕ್ ಮತ್ತಿತರ ತ್ಯಾಜ್ಯ ಪದಾರ್ಥಗಳು ಕಣ್ಣಿಗೆ ಗೋಚರಿಸುತ್ತಿದ್ದರೂ ನೈರ್ಮಲ್ಯ ಕಾಪಾಡಿಕೊಳ್ಳಬೇಕಿದ್ದ ಗ್ರಾಮ ಪಂಚಾಯಿತಿ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಚರಂಡಿ ಅವ್ಯವಸ್ಥೆಯಿಂದ ಮೂಗು ಮುಚ್ಚಿಕೊಂಡು ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅದರಿಂದ ಸೊಳ್ಳೆಗಳು ಹೆಚ್ಚಾಗಿ ಕಾಯಿಲೆಗಳು ಬಾಧಿಸುತ್ತಿವೆ.

ಪ್ರತಿವರ್ಷ ಕೋಡಿಮಠದ ಮಹದೇಶ್ವರ ಜಾತ್ರೆ ಸಮಯದಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಬೆಳೆದ ಗಿಡ ಸ್ವಚ್ಛತೆ ಮಾಡಿಸುತ್ತಿದ್ದರು. ಆದರೆ ಈ ವರ್ಷ ಗ್ರಾಮ ಪಂಚಾಯಿತಿ ಆ ನಿಟ್ಟಿನಲ್ಲಿ ಕ್ರಮ ಕೈಗೊಂಡಿಲ್ಲ. ಗ್ರಾಮ ದೇವತೆ ಕೋಡಮ್ಮ ದೇವಿ, ಬೇವಿನ ಮರದಮ್ಮ ರಥೋತ್ಸವ, ಜೇನುಕಲ್ ಸಿದ್ದೇಶ್ವರ ಸ್ವಾಮಿ ಜಾತ್ರೆ ಶೀಘ್ರದಲ್ಲಿ ನೆರವೇರಲಿದ್ದು, ಇನ್ನಾದರೂ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಗ್ರಾ.ಪಂ. ಮಾಜಿ ಸದಸ್ಯ ಕೃಷ್ಣಪ್ಪ ಆಗ್ರಹಿಸಿದ್ದಾರೆ.

# ಚನ್ನಕೇಶವಸ್ವಾಮಿ ದೇಗುಲಕ್ಕೆ ಆಭರಣ ರವಾನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್


ಬೇಲೂರು: ಚನ್ನಕೇಶವ ಸ್ವಾಮಿ ರಥೋತ್ಸವ ಹಾಗೂ ವಿಶೇಷ ಪೂಜಾ ವಿಧಿ ವಿಧಾನ ಪ್ರಾರಂಭವಾಗುವ ಹಿನ್ನೆಲೆಯಲ್ಲಿ ಶ್ರೀ ಚನ್ನಕೇಶವ, ಸೌಮ್ಯನಾಯಕಿ, ರಂಗನಾಯಕಿ ಅಮ್ಮನವರಿಗೆ ಧರಿಸುವ ಒಡವೆಗಳನ್ನು ತಹಶೀಲ್ದಾರ್ ಕಚೇರಿಯ ಖಜಾನೆಯಿಂದ ವಿಶೇಷ ಪೂಜೆಯೊಂದಿಗೆ ಪಲ್ಲಕ್ಕಿ ಅಡ್ಡೆಯ ಮೂಲಕ ದೇವಾಲಯಕ್ಕೆ ರವಾನಿಸಲಾಯಿತು.

ದೇಗುಲದ ಪ್ರಧಾನ ಅರ್ಚಕರಾದ ನರಸಿಂಹ ಸ್ವಾಮಿ ಭಟ್, ಶ್ರೀನಿವಾಸ ಭಟ್ ಪೂಜೆ ಸಲ್ಲಿಸಿ ಪುರಸಭಾಧ್ಯಕ್ಷ ಎ.ಆರ್. ಅಶೋಕ್, ತಹಶೀಲ್ದಾರ್ ಎಂ. ಮಮತ ದೇವಾಲಯದ ಕಾರ್ಯನಿರ್ವಹಣಾ ಅಧಿಕಾರಿ ಯೋಗೇಶ್ ಅವರ ಸಮ್ಮುಖದಲ್ಲಿ ಆಭರಣ ಪೆಟ್ಟಿಗೆ ತೆರೆಯಲಾಯಿತು.



ಪುರಸಭಾಧ್ಯಕ್ಷ ಎ.ಆರ್. ಅಶೋಕ್ ಮಾತನಾಡಿ, ಯುಗಾದಿ ಹಬ್ಬದಿಂದ 15 ದಿನಗಳ ಕಾಲ ಚನ್ನಕೇಶವ ಸ್ವಾಮಿ ಜಾತ್ರಾಮಹೋತ್ಸವ ವಿಜೃಂಭಣೆಯಿಂದ ಜರುಗುವುದರಿಂದ ಸ್ವರ್ಣಾಲಂಕಾರದೊಂದಿಗೆ ಶ್ರೀ ಚನ್ನಕೇಶವ ಸ್ವಾಮಿ ಹಾಗೂ ಸೌಮ್ಯನಾಯಕಿ ಹಾಗೂ ರಂಗನಾಯಕಿ ಅಮ್ಮನವರಿಗೆ ಬಂಗಾರದೊಡವೆ ಹಾಕಿ ಪೂಜೆ ಸಲ್ಲಿಸಲಾಗುವುದು ಹಾಗೂ ಪುರಸಭೆಯಿಂದ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದರು.

# ಯೂಟ್ಯೂಬ್ ಪತ್ರಕರ್ತರ ಹಾವಳಿ-ಪ್ರಾಮಾಣಿಕರಿಗೆ ಸಂಕಷ್ಟ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಇತ್ತೀಚಿನ ದಿನದಲ್ಲಿ ಕೆಲ ಯೂಟ್ಯೂಬರ್‌ಗಳು ಪತ್ರಕರ್ತರ ಹಣೆಪಟ್ಟಿಕೊಂಡು ಪತ್ರಿಕಾರಂಗದಲ್ಲಿ ಗೊಂದಲ ಸೃಷ್ಟಿಗೆ ಮುಂದಾಗಿದ್ದಾರೆ. ಈ ಬೆಳವಣಿಗೆ ಪ್ರಾಮಾಣಿಕ ಪತ್ರಕರ್ತರಿಗೆ ಸಂಕಷ್ಟ ತಂದೊಡ್ಡಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹೆಚ್.ಬಿ. ಮದನ್‌ಗೌಡ ಹೇಳಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿದ ಇತ್ತೀಚಿಗೆ ಅರ್ಬನ್ ಬ್ಯಾಂಕ್‌ಗೆ ಅಯ್ಕೆಯಾದ ನೂತನ ಅಧ್ಯಕ್ಷರು ಮತ್ತು ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದರು. ಪ್ರಸಕ್ತ ದಿನಗಳಲ್ಲಿ ಯೂಟ್ಯೂಬ್ ಟಿವಿ ಎಂದು ಸರ್ಕಾರಿ ಇಲಾಖೆಗಳ ವಿರುದ್ಧ ಆರ್‌ಟಿಐ ಅರ್ಜಿ ಸಲ್ಲಿಸಿ, ಸರ್ಕಾರಿ ಕೆಲಸಗಳಿಗೆ ಅಡ್ಡಿಪಡಿಸುವ ಜೊತೆಗೆ ಭ್ರಷ್ಟಾಚಾರ ನಡೆಸುತ್ತಿದ್ದಾರೆ. ಇಂತಹ ಸಮಾಜಘಾತುಕ ಶಕ್ತಿಗಳಿಂದ ಪ್ರಾಮಾಣಿಕ ಪತ್ರಕರ್ತರಿಗೆ ಸಂಕಷ್ಟವಾಗಿದೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಈ ನಿಟ್ಟಿನಲ್ಲಿ ಬಿಗಿ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸಂಘದಲ್ಲಿ ಕ್ರಿಯಾಶೀಲ ಪತ್ರಕರ್ತರಿಗೆ ಅವಕಾಶ ನೀಡುತ್ತಾ ಬಂದಿದೆ. ಇತ್ತೀಚಿನ ದಿನದಲ್ಲಿ ಪತ್ರಕರ್ತರು ತಮ್ಮ ಕರ್ತವ್ಯದ ಜೊತೆಗೆ ಸಹಕಾರಿ ಸಂಘ ಸೇರಿದಂತೆ ಇನ್ನಿತರ ಸಂಘ-ಸಂಸ್ಥೆಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿರುವುದು ಉತ್ತಮ ಬೆಳವಣಿಗೆ. ಇಂತಹ ಸಂಸ್ಥೆಯಲ್ಲಿ ಪತ್ರಕರ್ತರು ಕೆಲಸವನ್ನು ಪಾರದರ್ಶಕತೆಯಿಂದ ನಿರ್ವಹಿಸಿ, ಕಾರಣ ಸಾರ್ವಜನಿಕರು ನಿಮ್ಮ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದು ಅವರ ನಂಬಿಕೆ ಉಳಿಸುವ ಪ್ರಯತ್ನ ಮಾಡಿ ಎಂದರು.

ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ರಘುನಾಥ್, ಜಿಲ್ಲಾ ಉಪಾಧ್ಯಕ್ಷ ಡಿ.ಬಿ. ಮೋಹನ್ ಕುಮಾರ್, ಪ್ರಧಾನ ಕಾರ್ಯದರ್ಶಿ ಬಿ.ಬಿ. ಶಿವರಾಜ್, ಉಪಾಧ್ಯಕ್ಷ ಜಗದೀಶ್, ಖಜಾಂಚಿ ಎನ್. ಅನಂತು, ಮಾಜಿ ಅಧ್ಯಕ್ಷರಾದ ರಾಘವೇಂದ್ರ ಹೊಳ್ಳ, ಹೆಬ್ಬಾಳು ಹಾಲಪ್ಪ, ಪದಾಧಿಕಾರಿಗಳಾದ ಮಲ್ಲೇಶ್, ಬಿ.ಎಲ್. ಲಕ್ಷ್ಮಣ್, ಎಂ.ಸಿ. ಕುಮಾರ್, ಆರ್. ವೆಂಕಟೇಶ್, ಪೈಂಟ್ ರವಿ, ನಂದಕುಮಾರ್, ಹರೀಶ್ ಇತರರಿದ್ದರು.

# ದುಡ್ಡು ಪಡೆದ ಮತದಾರ ಒಳ್ಳೆಯವರನ್ನು ಗೆಲ್ಲಿಸುವುದಿಲ್ಲ

## ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಹಣ ಪಡೆದು ಮತ ನೀಡುವ ಪ್ರಜೆಗಳು ಯಾವತ್ತಿಗೂ ಯೋಗ್ಯರನ್ನು ಗೆಲ್ಲಿಸುವುದಿಲ್ಲ. ಕಾನೂನಿನ ಕನಿಷ್ಠ ಜ್ಞಾನ ಹಾಗೂ ಜನಪರ ಕಾಳಜಿ ಇಲ್ಲದಿರುವವರು ವಿಧಾನಸಭೆಗೆ ಬರುವುದರಿಂದ ಶಾಸಕರ ಅಮಾನತು, ರಾಷ್ಟ್ರ ಮಟ್ಟದಲ್ಲಿ ರಾಜ್ಯದ ಮಾನ ಹರಾಜು ಆಗುವಂತಹ ಘಟನೆಗಳು ನಡೆಯುತ್ತಿವೆ ಎಂದು ವಿಧಾನ ಪರಿಷತ್ ಉಪಸಭಾಪತಿ ಬಸವರಾಜ್ ಹೊರಟ್ಟಿ ಅಭಿಪ್ರಾಯಪಟ್ಟರು.



ಪಟ್ಟಣದ ನಾಡಪ್ರಭು ಕೆಂಪೇಗೌಡ ಪ್ರತಿಮೆ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತದಾರರು ಹಣದ ವ್ಯಾಮೋಹಕ್ಕೆ ಬಲಿಯಾಗದೆ ಉತ್ತಮ ವ್ಯಕ್ತಿಗಳನ್ನು ಆಯ್ಕೆ ಮಾಡಿದಾಗ ಮಾತ್ರ ಸದನ ಸುಗಮವಾಗಿ ಕಾರ್ಯನಿರ್ವಹಿಸುತ್ತದೆ. ನೋಟು ಪಡೆದು ಓಟು ಹಾಕುವವರಿಗೆ ಪ್ರಜಾಪ್ರಭುತ್ವದ ಹಕ್ಕು ಕೇಳುವ ಅಧಿಕಾರ ಇಲ್ಲ ಎಂದು ಅಭಿಪ್ರಾಯಪಟ್ಟರು.

ವಿಧಾನ ಪರಿಷತ್ತಿಗೆ ಮೊದಲಿನ ದಿನಗಳಲ್ಲಿ ಸಾಹಿತಿಗಳು, ಚಿಂತಕರು, ಸಿನಿಮಾ ನಟರು, ಸಮಾಜ ಸೇವಕರು ಪ್ರವೇಶಿಸುತ್ತಿದ್ದರು. ಆದರೆ ಇದೀಗ ಪರಿಸ್ಥಿತಿ ಬದಲಾಗಿದೆ. ಇದು ರಾಜಕೀಯದ ಕೇಂದ್ರವಾಗಿ ಮಾರ್ಪಟ್ಟಿದೆ. 113 ವರ್ಷಗಳ ಇತಿಹಾಸವಿರುವ ಕರ್ನಾಟಕ ವಿಧಾನ ಪರಿಷತ್ತು ರಾಜ್ಯದ ಶ್ರೇಷ್ಠ ಪರಿಷತ್ತಾಗಿ ಗುರುತಿಸಿಕೊಂಡಿತ್ತು. ರಾಜ್ಯಪಾಲರ ಭಾಷಣ ಹಾಗೂ ಮುಖ್ಯಮಂತ್ರಿಗಳ ಬಜೆಟ್ ಭಾಷಣದ ವೇಳೆ 9 ಗಂಟೆ ಕಾಲ 17 ಜನರನ್ನು ಮಾತನಾಡಲು ಅವಕಾಶ ನೀಡಿದರೂ ನಿರೀಕ್ಷಿತ ಚರ್ಚೆ ನಡೆಯಲಿಲ್ಲ ಎಂದರು.

ಮಾ. 27ರಂದು ನಡೆದ ಸರ್ವಪಕ್ಷ ಸಭೆಯಲ್ಲಿ ನಾನು ಈ ಕುರಿತು ಚರ್ಚೆ ನಡೆಸಿದ್ದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಪುನಾರಾವೃತ್ತಿಯಾಗದಂತೆ ಕ್ರಮ ಕೈಗೊಳ್ಳುವ ಭರವಸೆ ಪಡೆದಿದ್ದರಿಂದ ರಾಜೀನಾಮೆ ನಿರ್ಧಾರ ಕೈಬಿಟ್ಟಿದ್ದೇನೆ ಎಂದು ಅವರು ತಿಳಿಸಿದರು.

ನಾವು ದೇಶ ಮತ್ತು ರಾಜ್ಯದ ಹಿತದ ಬಗ್ಗೆ ಜವಾಬ್ದಾರಿಯಿಂದ ಮುಂದುವರಿಯಬೇಕು. ಸದನದಲ್ಲಿ ಪ್ರಶ್ನೆಗಳು ಕೇಳುತ್ತವೆ, ಉತ್ತರ ಸಿಗುತ್ತದೆ, ಆದರೆ ಗಂಭೀರ ಚರ್ಚೆ ನಡೆಯುವುದಿಲ್ಲ. ಅನಾವೃಷ್ಟಿ, ಅತಿವೃಷ್ಟಿ, ಆರೋಗ್ಯ ಸೇರಿದಂತೆ ಮಹತ್ವದ ಸಮಸ್ಯೆಗಳ ಬಗ್ಗೆ ಚರ್ಚೆಯಾಗದೇ, ವಾಗ್ಯುದ್ಧ ಮಾತ್ರ ನಡೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಚುನಾವಣೆ ನೀತಿಗಳ ಬದಲಾವಣೆಯಿಂದ ಏನೂ ಸಾಧಿಸುವ ಸಾಧ್ಯವಿಲ್ಲ, ಮತದಾರರೇ ನೈತಿಕತೆಯಿಂದ ಮತ ಚಲಾಯಿಸಬೇಕು. ಶಿಷ್ಟಾಚಾರದ ಅರಿಕೆ, ಭಯ ರಹಿತ ರಾಜಕೀಯ ಮನೋಭಾವ ಇಂತಹ ಸಮಸ್ಯೆಗಳ ಮೂಲ ಕಾರಣ. ಮತದಾರರ ಹೊಣೆಗಾರಿಕೆಯಿಂದ ಮಾತ್ರ ರಾಜಕೀಯ ಶುದ್ಧೀಕರಣ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ಸದನದಲ್ಲಿ ಹಿರಿಯ-ಕಿರಿಯ ಎಂಬ ಭೇದ ಇಲ್ಲ. ಶಾಸಕರಾದ ಬಳಿಕ ಎಲ್ಲರಿಗೂ ಮಾತನಾಡುವ ಅವಕಾಶವಿರಬೇಕು. ಪೂರ್ವದಲ್ಲಿ ಕೈಯೆತ್ತಿದವರಿಗೆ ಮಾತ್ರ ಅವಕಾಶ ನೀಡಲಾಗುತ್ತಿತ್ತು. ಈಗಿನ ಸಮಸ್ಯೆಯು ಮತದಾರರ ಭಯ ಶಾಸಕರಲ್ಲಿ ಇಲ್ಲದಿರುವುದಾಗಿದೆ. ಹಣ ಕೊಟ್ಟರೆ ಮತ ಸಿಗುತ್ತದೆ ಎಂಬ ಮನೋಭಾವ ರಾಜಕೀಯದಲ್ಲಿ ಬೇರೂರಿದೆ. ಜಾತಿ ಪ್ರಭಾವವೂ ಇದಕ್ಕೆ ಹೆಚ್ಚುವರಿ ಕಾರಣ, ಎಂದು ಅವರು ವ್ಯಾಖ್ಯಾನಿಸಿದರು.

ವಿರೋಧ ಪಕ್ಷದ ನಾಯಕರು, ಸಭಾನಾಯಕರು ಹಾಗೂ ಸಭಾಪತಿಗಳಿಗೆ ಗೌರವ ನೀಡುವ ಸಂಸ್ಕೃತಿ ಬೆಳೆಸಬೇಕಾಗಿದೆ. ಶಾಸಕರಿಗೆ ಪಾಠ ಹೇಳಿ ಅರಿವು ಮೂಡಿಸುವ ಕಾರ್ಯ ಅವಶ್ಯಕವಾಗಿದೆ, ಎಂದು ಅವರು ಹೇಳಿದರು.

ಮಾಜಿ ಶಾಸಕ ಎಚ್.ಎಂ. ವಿಶ್ವನಾಥ್, ಸಂಘದ ಪದಾಧಿಕಾರಿ ಸಾಬಾಬಸ್ಕರ್, ಸುಬ್ರಹ್ಮಣ್ಯ, ಪುರಸಭೆ ಮಾಜಿ ಅಧ್ಯಕ್ಷ ಕಾಳಪ್ಪ, ಆದರ್ಶ ಹಾಗೂ ಇನ್ನಿತರರು ಇತರರಿದ್ದರು.

# ಸಿಲಿಂಡರ್ ಸ್ಫೋಟ: ಅಪಾರ ಹಾನಿ

ಅರಕಲಗೂಡು: ತಾಲ್ಲೂಕಿನ ಕೊಣನೂರು ಪಟ್ಟಣದ ಗೌಡರ ಬೀದಿಯಲ್ಲಿ ಸಿಲಿಂಡರ್ ಸ್ಫೋಟಗೊಂಡು ಮನೆಯ ಪಿಠೋಪಕರಣಗಳು ಹೊತ್ತಿ ಉರಿದ ಘಟನೆ ನಡೆದಿದೆ.

ಮಂಗಳ ಎಂಬುವವರ ಮನೆಯಲ್ಲಿ ಘಟನೆ ನಡೆದಿದೆ. ಕುಟುಂಬದ ಸದಸ್ಯರೊಬ್ಬರು ನಿಧನರಾದ ಹಿನ್ನೆಲೆಯಲ್ಲಿ 11ನೇ ದಿನದ ಕಾರ್ಯ ಮಾಡಲು ಅಡುಗೆ ಮಾಡುತ್ತಿದ್ದರು. ಅಡುಗೆ ಎಣ್ಣೆ ಸಿಲಿಂಡರ್‌ನ ಪೈಪ್ ಹಾಗೂ ಎಲೆಕ್ಟ್ರಿಕಲ್ ವೈರ್‌ಗೆ ಹಾರಿದ ಪರಿಣಾಮ ಬೆಂಕಿ ಹೊತ್ತಿದೆ. ಮಂಜುಳ ಎಂಬುವವರು ಎಚ್ಚೆತ್ತು ಮನೆಯಿಂದ ಹೊರ ಓಡಿ ಬಂದಿದ್ದಾರೆ. ತಕ್ಷಣವೇ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಮನೆಯಲಿದ್ದ ಅಪಾರ ಬೆಲೆಬಾಳುವ ವಸ್ತುಗಳು ಬೆಂಕಿಗೆ ಆಹುತಿಯಾಗಿವೆ. ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ ಬೆಂಕಿ ನಂದಿಸಿದರು.

# ನಾಳೆ ದೇವರ ದಾಸಿಮಯ್ಯ ಜಯಂತಿ

ಹಾಸನ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏ. 2ರ ಬೆಳಿಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ದೇವರ ದಾಸಿಮಯ್ಯ ಜಯಂತಿ ಆಯೋಜಿಸಲಾಗಿದೆ.

ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ.

ಶಾಸಕ ಹೆಚ್.ಪಿ. ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಶ್ರೇಯಸ್ ಎಂ.ಪಟೇಲ್, ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಭಾಗವಹಿಸುವರು. ಸಾಹಿತಿ ಗೊರೂರು ಅನಂತರಾಜು ಉಪನ್ಯಾಸ ನೀಡಲಿದ್ದಾರೆ.

# ಕಾರು ಡಿಕ್ಕಿ: ಮಹಿಳೆ ಸಾವು

ಹಾಸನ: ತಾಲ್ಲೂಕಿನ ಕಾರೆಕೆರೆ ಗೇಟ್ ಸಮೀಪ ಭಾನುವಾರ ಸಂಭವಿಸಿದ ಎರಡು ಕಾರುಗಳ ನಡುವಿನ ಡಿಕ್ಕಿಯಲ್ಲಿ ಮಹಿಳೆ ಮೃತಪಟ್ಟು ಇಬ್ಬರು ಗಾಯಗೊಂಡಿದ್ದಾರೆ.

ಶಾಂತಿಗ್ರಾಮ ಹೋಬಳಿ ಕೆ.ಹೊಸಕೊಪ್ಪಲು ಗ್ರಾಮದ ಶಾಂತಮ್ಮ (47) ಮೃತರು. ಪತಿ ನಾಗೇಶ್, ಅವರ ಅತ್ತೆ ಗೌರಮ್ಮ ಹಾಗೂ ಬಾಲಕಿ ಯುಕ್ತಿ ಅವರ ಜೊತೆಗೆ ಚನ್ನರಾಯಪಟ್ಟಣ ತಾಲ್ಲೂಕಿನ ಕತ್ತರಿಘಟ್ಟ ದೇವಸ್ಥಾನಕ್ಕೆ ತೆರಳಿದ್ದರು. ಪೂಜೆ ಮುಗಿಸಿಕೊಂಡು ವಾಪಸ್ ಬರುತ್ತಿದ್ದಾಗ ಅಪಘಾತ ಸಂಭವಿಸಿದೆ. ಹಿಂದಿನಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದ್ದು ಮುಂದೆ ಹೊರಟಿದ್ದ ನಾಗೇಶ್ ಅವರ ಕಾರು ಡಿವೈಡರ್‌ಗೆ ಡಿಕ್ಕಿಯಾಗಿ ಪಲ್ಟಿಯಾಗಿದೆ. ಶಾಂತಮ್ಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ಗೌರಮ್ಮ ಹಾಗೂ ಯುಕ್ತಿಗೆ ಹಿಮ್ಸ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿಶ್ವ ರಂಗಭೂಮಿ ದಿನಾಚರಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ವಿಶ್ವಪಥ ಚಾರಿಟಬಲ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ನಾಟಕ ಹಾಗೂ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪಿ. ಲಂಕೇಶ್ ರಚನೆಯ ಪೊಲೀಸರಿದ್ದಾರೆ ಎಚ್ಚರಿಕೆ ನಾಟಕ ನೋಡುಗರ ಗಮನ ಸೆಳೆಯಿತು. ನಾಟಕದ ನಿರ್ದೇಶನ ಮಾಡುವುದರ ಜೊತೆಗೆ ರುದ್ರಮೂರ್ತಿ ಪಾತ್ರವನ್ನು ಪ್ರದೀಪ್ ರಂಗಾಯಣ, ಚಂದ್ರಶೇಖರ್ ಪಾತ್ರವನ್ನು ಅಣ್ಣಾಜಿಗೌಡ ಹಾಗೂ ರಂಗಣ್ಣ ಪಾತ್ರವನ್ನು ಕಾರ್ಯಕ್ರಮದ ನೇತೃತ್ವ ವಹಿಸಿಕೊಂಡಿದ್ದ ಟ್ರಸ್ಟ್ ಅಧ್ಯಕ್ಷ ಯದೀಶ್ ನಿರ್ವಹಿಸಿದರು.

ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲಾ, ಅಪರ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ ಹಾಗೂ ವೆಂಕಟೇಶ್ ನಾಯ್ಡು, ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ. ತಾರಾನಾಥ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಚಂಚಲ ಕುಮಾರಸ್ವಾಮಿ, ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಲ್. ಮಲ್ಲೇಶಗೌಡ ಮತ್ತಿತರರು ಉಸ್ಥಿತರಿದ್ದರು.

# ಮುಸ್ಲಿಂ ಬಾಂಧವರ ಸಾಮೂಹಿಕ ಪ್ರಾರ್ಥನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಮುಸ್ಲಿಂ ಬಾಂಧವರು ಸೋಮವಾರ ರಂಜಾನ್ ಹಬ್ಬವನ್ನು ಸಾಮೂಹಿಕವಾಗಿ ಆಚರಿಸಿದರು.



ನುಗ್ಗೇಹಳ್ಳಿ ಗ್ರಾಮದ ಈದ್ಗಾ ಮೈದಾನದಲ್ಲಿ ಪ್ರಾರ್ಥನೆ ಸಲ್ಲಿಸುವ ಮೂಲಕ ಶ್ರದ್ಧಾ ಭಕ್ತಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಗ್ರಾಮದ ಜುಮ್ಮಾ ಮಸೀದಿಯಲ್ಲಿ ಬೆಳಿಗ್ಗೆ ಮುಸ್ಲಿಂ ಬಾಂಧವರು ಹೊಸ ಬಟ್ಟೆ ಧರಿಸಿ ಸಿಹಿ ಹಂಚಿ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಹಿರೀಸಾವೆಯಲ್ಲಿ ಒಂದೆಡೆ ಸೇರಿ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡರು. ಕಳೆದ 1 ತಿಂಗಳ ಕಾಲ ಪವಿತ್ರ ರಂಜಾನ್ ಅಂಗವಾಗಿ ಉಪವಾಸ ಆಚರಿಸಿ ಭಾನುವಾರ ರಾತ್ರಿ ಉಪವಾಸವನ್ನು ಅಂತ್ಯಗೊಳಿಸಿದರು.

ನುಗ್ಗೇಹಳ್ಳಿಯಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ತಾಲ್ಲೂಕು ಮುಸ್ಲಿಂ ಸಮುದಾಯದ ಅಧ್ಯಕ್ಷ ಸಮೀಉಲ್ಲಾ ಖಾನ್, ಜುಮ್ಮಾ ಮಸೀದಿ ಅಧ್ಯಕ್ಷ ಪ್ಯಾರೂ ಖಾನ್, ಕಾರ್ಯದರ್ಶಿ ಆಶಮ್, ಸದಸ್ಯರಾದ ಅಡಿಕೆ ಬಾಬು, ಮೊಹಮ್ಮದ್ ಜಿಕ್ರಿಯ, ಅನ್ಸರ್ ಪಾಷಾ, ಅಲಿ, ಸಾದಾತ್, ಜಮ್ಮು, ಇಲಿಯಾಜ್, ಇಮ್ರಾನ್, ರಾವಳ್, ಅಮ್ಜದ್, ರಿಜ್ವಾನ್ ಇತರರಿದ್ದರು.

# 109 ಮಕ್ಕಳಿಗೆ ಎಂಡೋಮೆಂಟ್ ವಿದ್ಯಾರ್ಥಿ ವೇತನ ಚೆಕ್ ವಿತರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕೃಷಿಕ್ ಸರ್ವೋದಯ ಫೌಂಡೇಶನ್ ವತಿಯಿಂದ 2024-25ನೇ ಸಾಲಿನ ಕೃಷಿಕ್ ಸರ್ವೋದಯ ಫೌಂಡೇಶನ್ (ಎಂಡೋಮೆಂಟ್ ವಿದ್ಯಾರ್ಥಿ ವೇತನದ ಚೆಕ್ ವಿತರಣಾ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು.

ಹಾಸನ, ಚಿಕ್ಕಮಗಳೂರು, ಮಂಡ್ಯ, ಚಿತ್ರದುರ್ಗ, ತುಮಕೂರು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ 109 ಫಲಾನುಭವಿಗಳಿಗೆ ಚೆಕ್‌ಗಳನ್ನು ವಿತರಿಸಲಾಯಿತು.

ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್. ಮುದ್ದೇಗೌಡ ಮಾತನಾಡಿ, ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನದ ಸದುಪಯೋಗಪಡಿಸಿಕೊಳ್ಳಬೇಕು ಮತ್ತು ಹೆಚ್ಚು ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ವೇತನದ ಮಾಹಿತಿ ತಲುಪಿಸಬೇಕು ಎಂದು ತಿಳಿಸಿದರು.

ಶಾಖೆಯ ಗೌರವ ಕಾರ್ಯದರ್ಶಿ ಹೆಚ್.ಪಿ. ಮೋಹನ್ ಮಾತನಾಡಿ, 2024-25ನೇ ಸಾಲಿನಲ್ಲಿ ಕೃಷಿಕ್ ಸರ್ವೋದಯ ಫೌಂಡೇಶನ್‌ನ ಎಲ್ಲಾ ಶಾಖೆಗಳಿಂದ ರಾಜ್ಯಾದ್ಯಂತ 80 ಲಕ್ಷ ರೂ. ಮೊತ್ತದ ವಿದ್ಯಾರ್ಥಿ ವೇತನ ನೀಡುತ್ತಿದ್ದು ಕೃಷಿಕ್ ಸರ್ವೋದಯ ಫೌಂಡೇಶನ್ ಹಾಸನ ಶಾಖೆಯ ವತಿಯಿಂದ 18.15 ಲಕ್ಷ ಮೊತ್ತದ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

ಪಿಯುಸಿ ಓದುತ್ತಿರುವ ಅರ್ಹ ವಿದ್ಯಾರ್ಥಿಗಳಿಗೆ 10,000 ರೂ., ಪದವಿ ಓದುತ್ತಿರುವ ಅರ್ಹ ವಿದ್ಯಾರ್ಥಿಗಳಿಗೆ 15,000 ರೂ. ಹಾಗೂ ಸ್ನಾತ್ತಕೋತ್ತರ ಪದವಿ ಮತ್ತು ವೃತ್ತಿಪರ ಕೋರ್ಸ್ ಓದುತ್ತಿರುವ ಅರ್ಹ ವಿದ್ಯಾರ್ಥಿಗಳಿಗೆ 20,000 ರೂ. ವಿದ್ಯಾರ್ಥಿ ವೇತನ ನೀಡಲಾಗುವುದು ಎಂದು ತಿಳಿಸಿದರು.



ಪ್ರತಿ ವರ್ಷವೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ 40 ರಿಂದ 50 ಸಾವಿರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗುವುದು. ಕರ್ನಾಟಕದೆಲ್ಲೆಡೆ ಬ್ಯಾಂಕ್‌ಗಳಲ್ಲಿ ವ್ಯವಹರಿಸುವಾಗ ಭಾಷೆಯ ಅಡಚಣೆಯಾಗಿ ಗ್ರಾಹಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಗ್ರಾಹಕರ ಸಭೆಗಳಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ. ಆದುದರಿಂದ ಕರ್ನಾಟಕದ ಯುವಜನತೆ ಬ್ಯಾಂಕ್ ಪರೀಕ್ಷೆಗಳನ್ನು ಬರೆದು ಉತ್ತೀರ್ಣರಾಗಬೇಕೆಂಬ ಉದ್ದೇಶದಿಂದ ಕೃಷಿಕ್ ಸರ್ವೋದಯ ಫೌಂಡೇಶನ್ ವತಿಯಿಂದ ಬ್ಯಾಂಕ್ ನೇಮಕಾತಿ ಪರೀಕ್ಷೆಗಳಿಗೆ ಒಂದು ಬ್ಯಾಚ್ ಉಚಿತ ತರಬೇತಿ ನೀಡಲು ತೀರ್ಮಾನಿಸಲಾಗಿದೆ. ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ರಿಯಾಯಿತಿ ಶುಲ್ಕದಲ್ಲಿ ಕಂಬೈಂಡ್ ಕೋಚಿಂಗ್ ತರಬೇತಿ ಪ್ರಾರಂಭಿಸಲಾಗುವುದು. ಪದವಿ ಅಥವಾ ಸ್ನಾತಕ ಪದವಿ ಓದುತ್ತಿರುವ ವಿದ್ಯಾರ್ಥಿಗಳು ಈ ತರಬೇತಿಗೆ ನೊಂದಣಿ ಮಾಡಿಕೊಂಡು ಯಶಸ್ಸು ಗಳಿಸಬೇಕೆಂದು ತಿಳಿಸಿದರು.

ಕೆನರಾ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಡಾ. ಎಸ್.ಟಿ. ರಾಮಚಂದ್ರ, ಮಾತನಾಡಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿರುವ ಹೇರಳವಾದ ಉದ್ಯೋಗಾವಕಾಶಗಳ ಬಗ್ಗೆ, ಬ್ಯಾಂಕಿಂಗ್ ನೇಮಕಾತಿ ಪ್ರಕ್ರಿಯೆ, ಪಠ್ಯಕ್ರಮ, ಪರೀಕ್ಷೆಗಳಿಗೆ ತಯಾರಿ ನಡೆಸುವ ಬಗ್ಗೆ, ವೇತನ ಶ್ರೇಣಿ, ಬ್ಯಾಂಕ್ ಉದ್ಯೋಗಿಗಳಿಗೆ ನೀಡುವ ಸೌಲಭ್ಯಗಳ ಬಗ್ಗೆ ವಿವರಿಸಿ ಹೆಚ್ಚು ವಿದ್ಯಾರ್ಥಿಗಳು ಬ್ಯಾಂಕ್ ನೇಮಕಾತಿ ಪರೀಕ್ಷೆಗಳನ್ನು ಬರೆಯಬೇಕೆಂದು ಪ್ರೇರೇಪಿಸಿದರು.

ಶಾಖೆಯ ನಿರ್ದೇಶಕರಾದ ಹೆಚ್.ಜಿ. ಸತ್ಯನಾರಾಯಣ, ವೈ.ಎನ್. ಸುಬ್ಬುಸ್ವಾಮಿ, ಶಿವಣ್ಣ, ಹೆಚ್.ಎಸ್. ವಿರೂಪಾಕ್ಷ ಹಾಗೂ ಕಚೇರಿ ಸಂಯೋಜಕ ಬಿ. ಸಿದ್ದೇಗೌಡ ಇತರರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248